

# ಮಂಜರಾಬಾದಿನ ಅಜ್ಞಾತ ಕೋಟೆ

ಕೋಟೆ ಒಳ ದ್ವಾರದ ಮುಂಭಾಗ

■ ಚಿತ್ರ– ಲೇಖನ: **ಸಿ.ಸಿದ್ಧರಾಜು ಆಲಕೆರೆ**

ಮಂಜರಾಬಾದ್ ಕೋಟೆ ಕರ್ನಾಟಕದಲ್ಲಿರುವ ಅಪರೂಪದ ಕೋಟೆಗಳಲ್ಲೊಂದು. ಇದು ನಕ್ಷತ್ರಾಕಾರದಲ್ಲಿ ನಿರ್ಮಿಸಲ್ಪಟ್ಟ ರಾಜ್ಯದ ಏಕೈಕ ಕೋಟೆ. ಇದೊಂದು ರೀತಿಯಲ್ಲಿ ಮಿಶ್ರ ದುರ್ಗ. ವನದುರ್ಗ ಮತ್ತು ಗಿರಿದುರ್ಗ ಎರಡೂ ಮೇಳೈಸಿಕೊಂಡಿರುವ ಕೋಟೆ. ಇದನ್ನು ಕಟ್ಟಿಸಿದಾತ 'ಮೈಸೂರು ಹುಲಿ' ಟಿಪ್ಪುಸುಲ್ತಾನ್.

ಹಾಸನ–ಮಂಗಳೂರು ಹೆದ್ದಾರಿ ನಡುವೆ ಸಕಲೇಶಪುರ 42 ಕಿ.ಮೀ. ದೂರದಲ್ಲಿದೆ. ಈ ಮಾರ್ಗದಲ್ಲೇ ಐದಾರು ಕಿ.ಮೀ. ದೂರದಲ್ಲಿದೆ ಮಂಜರಾಬಾದ್ ಕೋಟೆ. ದೋಣಿಹಾಲ್ ಚೆಕ್‌ಪೋಸ್ಟ್ ಹತ್ತಿರ ಹೆದ್ದಾರಿಯ ಇಕ್ಕೆಲಗಳಲ್ಲಿ ಅಂಗಡಿಗಳು ಸಿಗುತ್ತವೆ. ಅಲ್ಲಿಂದಲೇ ಮಂಜರಾಬಾದ್ ಕೋಟೆಗೆ ಹೋಗುವುದು.

ಮಂಜರಾಬಾದ್ ಕೋಟೆ ಎತ್ತರದ ಬೆಟ್ಟದ ಮೇಲಿದೆ. ಸ್ಥಳೀಯವಾಗಿ ಈ ಬೆಟ್ಟವನ್ನು ದೋಣಿ ಗುಡ್ಡ ಎಂದು ಕರೆಯುತ್ತಿದ್ದರಂತೆ. ಈಗ ಮಂಜರಾಬಾದ್ ಎಂದೇ ಪರಿಚಿತ. ಕಡಿದಾದ 253 ಮೆಟ್ಟಿಲುಗಳನ್ನು ಹತ್ತಿ ಕೋಟೆ ತಲುಪಬೇಕಾಗುತ್ತದೆ. ಮೆಟ್ಟಿಲುಗಳಿಗೆ ಕಂಬಿಗಳನ್ನು ಅಳವಡಿಸಲಾಗಿದೆ. ಅಂಕುಡೊಂಕಾಗಿ ಮೆಟ್ಟಿಲು ಮಾರ್ಗವನ್ನು ಹಾದುಹೋದಾಗ ಕಾಡಿನಲ್ಲಿ ಹೋಗುವ ಅನುಭವ ಉಂಟಾಗುತ್ತದೆ.

ಕೋಟೆಯ ಪೂರ್ವ ದಿಕ್ಕಿನಲ್ಲಿ ಕೋಟೆಯ ಹೆಬ್ಬಾಗಿಲು. ದಾಟಿ ಒಳಹೋದಾಗ ಮೂರು ದ್ವಾರಗಳು ಸಿಗುತ್ತವೆ. ಅಂದರೆ, ಎಂಟು ಮೂಲೆ ನಕ್ಷತ್ರದ ಆಕಾರದಲ್ಲಿ ನಿರ್ಮಿಸಿರುವ ಈ ಕೋಟೆಗೆ ಎರಡು ಮೂಲೆಗಳ ಮಧ್ಯೆ ಒಂದು ಗೋಡೆ ನಿರ್ಮಿಸಿ, ಅದಕ್ಕೊಂದು ಅಡ್ಡಗೋಡೆ ನಿರ್ಮಿಸಲಾಗಿದೆ. ಹೊರದ್ವಾರ, ಮಧ್ಯೆದ್ವಾರ ಮತ್ತು ಒಳ ದ್ವಾರ ಎಂದು ಮೂರು ದ್ವಾರಗಳಿವೆ.

ಶತ್ರುಗಳು ಆಕಸ್ಮಿಕವಾಗಿ ಹೊರದ್ವಾರದಿಂದ ಒಳಪ್ರವೇಶಿಸಿದರೆ, ಕೋಟೆಯಿಂದಲೇ ಶತ್ರುಗಳ ವಿರುದ್ಧ ಹೋರಾಡಿ ಅವರು ಕೋಟೆ ಪ್ರವೇಶಿಸದಂತೆ ಮಾಡಲು ಈ ದ್ವಾರಗಳು. ಈಗ ಮಧ್ಯೆಯ ದ್ವಾರ ನಾಶವಾಗಿದೆ. ಹೊರ ದ್ವಾರ ಮತ್ತು ಒಳ ದ್ವಾರಗಳಿಗೆ ಪರ್ಶಿಯನ್ ಶೈಲಿಯ ಕಮಾನುಗಳಿವೆ.

ಕಲ್ಲು ಬಂಡೆಗಳಿಂದ ನಿರ್ಮಿಸಲಾದ ಕೋಟೆ ವಿಶಾಲವಾಗಿದೆ. ಕೋಟೆಯ ಮೇಲ್ಭಾಗದ ಕುಂಬಿ (ಚಿಕ್ಕಗೋಡೆ) ಯನ್ನು ಇಟ್ಟಿಗೆ ಹಾಗೂ ಕೈ ಗಾರೆಯಿಂದ ನಿರ್ಮಿಸಲಾಗಿದೆ. ಕೋಟೆಯ ಸುತ್ತ ಕಂದಕವನ್ನೂ ನಿರ್ಮಿಸಲಾಗಿತ್ತು.

ಕೋಟೆಯ ಎಂಟು ಮೂಲೆಗಳಲ್ಲೂ ಶತ್ರುಗಳನ್ನು ಗಮನಿಸಲು ವರ್ತುಲಾಕಾರದ ಕಾವಲು ಗೋಪುರಗಳಿವೆ. ಗೋಪುರದ ಗೋಡೆಗಳಲ್ಲಿ ಬಂದೂಕುಗಳನ್ನು ತೂರಿಸಲು ಕಿಂಡಿಗಳನ್ನು ಮಾಡಲಾಗಿದೆ. ಇವುಗಳ ಮೇಲ್ಛಾವಣಿಯನ್ನು ಗುಮ್ಮಟದ ರೀತಿಯಲ್ಲಿ ನಿರ್ಮಿಸಲಾಗಿದೆ.

ವಿಶಾಲವಾದ ಕೋಟೆಯ ಮಧ್ಯಭಾಗದಲ್ಲಿ ಕೊಳವಿದೆ. ಕೊಳಕ್ಕಿಳಿಯಲು ನಾಲ್ಕು ದಿಕ್ಕಿನಲ್ಲೂ ಇಟ್ಟಿಗೆ ಮತ್ತು ಕೈ ಗಾರೆಯಿಂದ ನಿರ್ಮಿಸಲಾದ ಮೆಟ್ಟಿಲುಗಳಿವೆ. ಮೇಲ್ನೋಟಕ್ಕೆ ಈ ಕೊಳ ಪ್ಲಸ್ (+) ಚಿಹ್ನೆಯ ಮಾದರಿಯಲ್ಲಿ ಕಾಣುತ್ತದೆ. ಈ ಕೊಳದ ಪಕ್ಕದಲ್ಲೇ ಎರಡು ಮದ್ದಿನ ಮನೆಗಳಿವೆ. ಇವುಗಳನ್ನು ನೆಲಮಟ್ಟಕ್ಕಿಂತ ಕೆಳಗೆ ಇರುವಂತೆ ಹಾಗೂ ಗುಡಿಸಲಿನಾಕಾರದ ಮೇಲ್ಛಾವಣಿಗಳು ನೆಲ ಮಟ್ಟಕ್ಕಿಂತ ಮೇಲ್ಭಾಗಕ್ಕೆ ಬಂದಿರುವಂತೆ ನಿರ್ಮಿಸಲಾಗಿದೆ. ಈ ಮದ್ದಿನ ಮನೆಗಳಿಗೆ ಪ್ರವೇಶ ಮಾಡಲು ಪ್ರವೇಶದ್ವಾರಗಳಿವೆ.

ಹಿನ್ನೆಲೆ: ಪಶ್ಚಿಮಘಟ್ಟದ ಶ್ರೇಣಿಯ ಅಂಚಿನಲ್ಲಿ ಅರಣ್ಯದಿಂದ ಕೂಡಿದ ಈ ಪ್ರದೇಶ ಸಮುದ್ರ ಮಟ್ಟಕ್ಕಿಂತ 914 ಮೀಟರ್ ಎತ್ತರದಲ್ಲಿದೆ. ಇಂತಹ ಎತ್ತರದ ಸ್ಥಳದಲ್ಲಿ ಕೋಟೆ ನಿರ್ಮಿಸುವುದು ಟಿಪ್ಪುವಿಗೆ ಅಂದು ಅನಿವಾರ್ಯವಾಗಿತ್ತು.

ಬ್ರಿಟಿಷರು 2ನೇ ಆಂಗ್ಲೋಮೈಸೂರು ಕದನವನ್ನು ಅಂತ್ಯಗೊಳಿಸಲು ಟಿಪ್ಪು ಜತೆ 1784ರಲ್ಲಿ ಮಂಗಳೂರು ಒಪ್ಪಂದ ಮಾಡಿಕೊಂಡರು. ಈ